

ತಗುಲದ ರೀತಿಯಲ್ಲಿ ಚಿಕಿತ್ಸೆ ನೀಡಬಹುದು. ಆದರೆ ಗಂಭೀರ ಸ್ವರೂಪದ ದೈಹಿಕ ಗಾಯಗಳಿಗೆ ಚಿಕಿತ್ಸೆ ನೀಡಿದರೂ ಗುಣವಾಗುವ ಸಮಯ ಅಧಿಕ' ಎಂದು ಹೇಳುತ್ತಾರೆ ಶಿವಮೊಗ್ಗದಲ್ಲಿರುವ ಐಲೆಟ್ಸ್ ಮಧುಮೇಹ ಕೇಂದ್ರದ ವೈದ್ಯಕೀಯ ನಿರ್ದೇಶಕ ಡಾ. ಪ್ರೀತಮ್ ಬಿ.

'ಸರ್ಜರಿ ಆದಾಗ ದೇಹದಲ್ಲಿ ಹಾನಿಗೊಳಗಾದ ಕೆಲವಾರು ಇಂಚುಗಳಷ್ಟು ಭಾಗವನ್ನು ಸೀಳಬೇಕಾಗುತ್ತದೆ. ಹಲವು ಪದರಗಳಲ್ಲಿ ಚರ್ಮವನ್ನು ಸೀಳಿ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಸೂಕ್ತವಾದ ಆ್ಯಂಟಿ ಬಯಾಟಿಕ್, ಇಂಜೆಕ್ಷನ್, ಔಷಧಿಗಳನ್ನು ನೀಡಿದರೂ ರಕ್ತದಲ್ಲಿ ಸಕ್ಕರೆಯ ಅಂಶದ ಏರುಪೇರಿನಿಂದಾಗಿ ಇಂತಹ ಗಾಯಗಳು ಬೇಗನೆ ಗುಣವಾಗುವುದಿಲ್ಲ. ಮುಖ್ಯವಾಗಿ ಕ್ಯಾನ್ಸರ್‌ಗೆ ಮಾಡುವ ಸರ್ಜರಿಯಲ್ಲಿ ಗಾಯ ಮಾಯುವುದೇ ಇಲ್ಲ. ಇದಕ್ಕಾಗಿ ವಿಶೇಷ ಚಿಕಿತ್ಸೆಯ ಅಗತ್ಯವಿದೆ. ಇಂಥ ಗಾಯಗಳು ಮಾಯಲು ಕನಿಷ್ಠ ಒಂದು ತಿಂಗಳಾದರೂ ಬೇಕು. ಗಂಭೀರ ಸ್ವರೂಪದ ಗಾಯಗಳಲ್ಲಿ ಸೋಂಕು ತಗುಲಬಹುದು, ಬ್ಯಾಕ್ಟೀರಿಯಾಗಳಿಂದ ಬಾಧೆ ಉಂಟಾಗಬಹುದು, ಮೂಳೆ ಮುರಿತದಿಂದ ಉಂಟಾಗುವ ಗಾಯ, ಅಸೌಖ್ಯದ ಕಾರಣ ತಿಂಗಳಾನುಗಟ್ಟಲೆ ಹಾಸಿಗೆಯಲ್ಲಿ ಮಲಗಿದಾಗ ಉಂಟಾಗುವ ಆಳವಾದ ಬೆನ್ನಿನ ಗಾಯ, ಸುಟ್ಟ ಗಾಯಗಳಿಗೆ ಬ್ಯಾಕ್ಟೀರಿಯಾ ಸೋಂಕುಗಳಿಂದ ಗಾಯ ಉಲ್ಬಣಾವಸ್ಥೆ ತಲುಪಿ ಗಂಭೀರ ಗಾಯಗಳಾಗಿ ಪರಿಣಮಿಸುತ್ತದೆ' ಎಂದು ವಿವರ ನೀಡುತ್ತಾರೆ ಡಾ. ಪ್ರೀತಮ್.

ಡಯಾಬಿಟಿಸ್ ರೋಗಿಗಳ ಗಾಯ ಬೇಗನೆ ಗುಣವಾಗಿಸಲೆಂದೇ ಅಮೆರಿಕ ವೈದ್ಯಕೀಯ ತಂತ್ರಜ್ಞಾನದ ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ (ಎಚ್‌ಬಿಒಟಿ) ಲಭ್ಯವಿದೆ.

## ಏನಿದು ಹೈಪರ್‌ಬೇರಿಕ್ ಥೆರಪಿ?

ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ (HBOT) ಎಂದರೆ ದೇಹದೊಳಗೆ ಕಾರ್ಬನ್ ಮಾನಾಕ್ಸೈಡ್‌ನಿಂದ ಉಂಟಾದ ವಿಷ, ಮಧುಮೇಹದಿಂದ ಆಗುವ ಗ್ಯಾಂಗ್ರೀನ್ ಹಾಗೂ ಇತರ ಗಾಯಗಳನ್ನು ಅತ್ಯಂತ ಶೀಘ್ರವಾಗಿ ಗುಣಪಡಿಸುವ ಒಂದು ವಿಶಿಷ್ಟ ಚಿಕಿತ್ಸೆ. ಆಕ್ಸಿಜನ್ ಮುಖಾಂತರ ಸೋಂಕು ನಿವಾರಣೆ ಮಾಡುವ ವೈದ್ಯಕೀಯ ಪ್ರಕ್ರಿಯೆ ಇದು.

ಮಧುಮೇಹಿಗಳಿಗೆ ಗಾಯವಾಗಿ ಗ್ಯಾಂಗ್ರೀನ್ ಆಗಿದ್ದರೆ ಗಾಯ ಮಾಯಲು ಈ ಆಕ್ಸಿಜನ್ ಥೆರಪಿ ಬಹಳ ಪರಿಣಾಮಕಾರಿ. ಬ್ಯಾಕ್ಟೀರಿಯಾದಿಂದ ಗ್ಯಾಂಗ್ರೀನ್ ಹರಡುವುದನ್ನು ಈ ಥೆರಪಿಯಿಂದ ತಡೆಯಲು ಸಾಧ್ಯ.

'ಸಾಮಾನ್ಯವಾಗಿ ಮಧುಮೇಹ ಇದ್ದವರಿಗೆ ಸ್ಪರ್ಶ ಜ್ಞಾನ ಕಡಿಮೆ ಇರುತ್ತದೆ. ಬರಿಗಾಲಿನಲ್ಲಿ ನಡೆದಾಗ ಸಣ್ಣಪುಟ್ಟ ಗಾಯಗಳಾದರೂ ಗೊತ್ತಾಗುವುದಿಲ್ಲ. ಉರಿಬಿಸಿಲಿನಲ್ಲಿ ಕಾದ ನೆಲದ ಮೇಲೆ ನಡೆದರೂ ಬಿಸಿಯ ಅನುಭವವಾಗುವುದಿಲ್ಲ. ಕಾಲುಗಳಲ್ಲಿ, ಪಾದಗಳಲ್ಲಿ ರಕ್ತಸಂಚಾರ ಕಡಿಮೆ ಆಗುವುದರಿಂದ ಈ ರೀತಿ ಆಗುವುದಾದರೂ ಗಾಯ ಮಾಯದೇ ಇದ್ದಾಗ ಅದು ಗ್ಯಾಂಗ್ರಿನ್ ಇಲ್ಲವೇ ಅಲ್ಸರ್ ಆಗುವ ಅಪಾಯ ಇದೆ' ಎಂದು ಹೇಳುತ್ತಾರೆ ಚೆನ್ನೈಯಲ್ಲಿರುವ ಮಧುಮೇಹ ತಜ್ಞ ಡಾ. ವಿಜಯ್ ವಿಶ್ವನಾಥನ್.

'ಎಚ್‌ಬಿಒಟಿಯಲ್ಲಿ ಆಮ್ಲಜನಕವನ್ನು ಬಳಸಿ ಇಡೀ ಚಿಕಿತ್ಸೆಯನ್ನು ನೀಡಲಾಗುತ್ತದೆ. ಎಂದರೆ ಶೇ. 100ರಷ್ಟು ಶುದ್ಧವಾದ ಆಮ್ಲಜನಕವನ್ನು ಬಳಸಲಾಗುವುದು. ಇದು ಸಾಮಾನ್ಯವಾಗಿ ನಾವು ಉಸಿರಾಡುವ ಗಾಳಿಯಲ್ಲಿರುವ ಆಮ್ಲಜನಕದ ಪರಿಶುದ್ಧತೆಯ ಪ್ರಮಾಣಕ್ಕಿಂತ ಹೆಚ್ಚು ಶುದ್ಧವಾಗಿದ್ದು, ಗಾಯವನ್ನು ಬಹು ಬೇಗನೆ ಮಾಯುವಂತೆ ಮಾಡುತ್ತದೆ. ಇದನ್ನು ಮೂಗಿನ ಮೂಲಕ, ಫೇಸ್ ಮಾಸ್ಕ್, ವೆಂಚುರಿ ಮಾಸ್ಕ್ ಮೂಲಕ ನೀಡಲಾಗುತ್ತದೆ. ತೀವ್ರ ಗಾಯವಾಗಿರುವ ಭಾಗಕ್ಕೆ ಶುದ್ಧ ಆಮ್ಲಜನಕ ಸೇರಿದಾಗ ಅಲ್ಲಿ ರಕ್ತದ ಕಣಗಳು ಪುನಶ್ಚೇತನಗೊಳ್ಳುತ್ತದೆ. ಅಲ್ಲದೆ ಅಡಚಣೆಯಾಗಿರುವ ರಕ್ತಸಂಚಾರ ಸುಗಮವಾಗಲು ಸಹಾಯವಾಗುತ್ತದೆ. ಈ ವಿಶಿಷ್ಟ ಥೆರಪಿ ದಕ್ಷಿಣ ಅಮೆರಿಕದಲ್ಲಿ ಸಾಕಷ್ಟು ಜನಪ್ರಿಯವಾಗಿದೆ' ಎಂದು ವಿವರ ನೀಡುತ್ತಾರೆ ಅವರು.

'ಅನೀಮಿಯಾ (ರಕ್ತಹೀನತೆ) ಇರುವವರಿಗೆ, ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ ವಿಪರೀತವಾಗಿ ರಕ್ತ ಸೋರಿಕೆ ಉಂಟಾಗಿ ಚಿಕಿತ್ಸೆ ಪಡೆಯಲು ಬಂದವರಿಗೆ ಈ ಎಚ್‌ಬಿಒಟಿ ಚಿಕಿತ್ಸೆ ಅನಿವಾರ್ಯವಾಗುತ್ತದೆ' ಎಂದು ಹೇಳುತ್ತಾರೆ ಡಾ. ವಿಜಯ್.

'ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿಯಲ್ಲಿ ಒಂದು ಸಾಧನದ ಒಳಗೆ ಶುದ್ಧ ಉಸಿರಾಟಕ್ಕೆ ಆಮ್ಲಜನಕವನ್ನು ಪೂರೈಸುವ ಸೌಲಭ್ಯ ಇದೆ. ದೀರ್ಘಕಾಲದ ಗಾಯ ಗುಣಪಡಿಸಲು ಇದು ಸಹಕಾರಿ. ಕೆಲವು ಸಂದರ್ಭಗಳಲ್ಲಿ ರೋಗಿಗೆ ಹೆಚ್ಚಿನ ಪ್ರಮಾಣದ ಆಕ್ಸಿಜನ್ ಕೊಡಬೇಕಾಗುತ್ತದೆ. ಮಕ್ಕಳಾದಿಯಾಗಿ ಇಂಥ ರೋಗಿಗಳು ಲವಲವಿಕೆಯಿಂದಲೇ ಇದ್ದರೂ ಆಕ್ಸಿಜನ್ ಹೈಡೋಸೇಜ್ ಮೂಲಕವೇ ಚಿಕಿತ್ಸೆ ನೀಡಬೇಕಾಗುತ್ತದೆ' ಎನ್ನುತ್ತಾರೆ ಈ ವೈದ್ಯರು.

ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿಯನ್ನು ಗ್ಯಾಂಗ್ರೀನ್ ಗುಣಪಡಿಸಲು ಮಾತ್ರವಲ್ಲದೆ ಕ್ಯಾನ್ಸರ್ ಚಿಕಿತ್ಸೆಯಲ್ಲಿ, ಕೊರೊನಾ ಚಿಕಿತ್ಸೆ, ನಿದ್ರಾಹೀನತೆಯಿಂದ ಬಳಲುವವರಿಗೆ ಸ್ಲೀಪ್ ಥೆರಪಿಯಲ್ಲಿ, ತೀವ್ರ ಉಸಿರಾಟ ತೊಂದರೆ ಇರುವವರಿಗೆ, ಆಟಿಸಂ ಸಮಸ್ಯೆ ಇರುವವರಿಗೆ ನೀಡಲಾಗುತ್ತದೆ.

ಈ ಚಿಕಿತ್ಸೆಯ ನಿರ್ವಹಣೆ ಅವಧಿ ರೋಗಿಯ ಕಾಯಿಲೆಯ ತೀವ್ರತೆಯನ್ನು ಅವಲಂಬಿಸಿದೆ. ಸಾಮಾನ್ಯವಾಗಿ ದಿನಕ್ಕೆ ಒಂದು ಗಂಟೆಯಂತೆ ಎರಡು ವಾರಗಳ ಕಾಲ ಈ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಅಲ್ಲದೆ ಚಿಕಿತ್ಸೆ ಬಗ್ಗೆ ಜನರಲ್ಲಿ ಅರಿವು ಇಲ್ಲ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 2022ರಲ್ಲಿ ಈ ಚಿಕಿತ್ಸೆ ಆರಂಭಿಸಲಾಗಿತ್ತು. ವೈಟ್‌ಫೀಲ್ಡ್‌ನಲ್ಲಿ ವೈದೇಹಿ ಆಸ್ಪತ್ರೆಯಲ್ಲಿ ಮಧುಮೇಹ ಗಾಯ ನಿವಾರಣೆಗಾಗಿಯೇ ಇರುವ 'ಡಾಲ್ವಕೋಟ್ ವೂಂಡ್ ಕೇರ್'ನಲ್ಲಿ ಈ ಚಿಕಿತ್ಸೆ ಲಭ್ಯ. ಆದರೆ ಈ ಚಿಕಿತ್ಸೆ ಬಲು ದುಬಾರಿಯೂ ಹೌದು.